ಹೆಸರು ಮತ್ತು ಮೇಲ್ವಿಚಾರ ಪೂರ್ತಿಯಾಗಿ ಕೆಳಗೆ ನಮೂದಿಸಲ್ಪಡಬೇಕು.

ದರಖಾಸ್ತು ಮಾಡೋಣವರ ತಾಕಿನ ವಿವರಣೆ.

ನಂಬರು.	ಹೆಸರು.	ವಿಸ್ತೀರ್ಣ.

ತಾರೀಖು 12ನೇ ಅಕ್ಟೋಬರ್ 1887.

ತಪ್ಪು ತಿದ್ದುಪಡಿ.

ನಂ. 134.—ಸ॥ 1884ನೇ ಇಸವಿ ಜೂನ್ 28ನೇ ವರ್ತಮಿನ ಮೈಸೂರು ಗೆಜೆಟ್ಟಿನ IIIನೇ ಭಾಗದಲ್ಲಿ ಪ್ರಾಯೋಷಾದ ಕನ್ನಡ ಸಿನಿಲ್ ಪ್ರೊಸಿಡ್ಯೂರ್ ಕೋಡಿನ 629ನೇ ಸೆಕ್ಷನಿನ 8ನೇ ಪಂಜ್ತಿಯಲ್ಲಿ "ಅಂಗೀಕಾರ ವಾಗಲಾರದೆಂಬ" ಯಂಬ ಮಾತುಗಳಿಗೆ ಬದಲಾಗಿ "ಅಂಗೀಕಾರವಾಗ ಬಹುದೆಂಬ" ಯಂದು ಓದಿಕೊಳ್ಳತಕ್ಕದ್ದು.

ತಾರೀಖು 14ನೇ ಅಕ್ಟೋಬರ್ 1887.

ಕ್ಯಾಂಪ್ ನಂ. 1502.—ಬನ್ನೂರಲ್ಲಿರುವ ಪಬ್ಲಿಕ್ ವರಕ್ಸ್ ಲಾಡ್ಜ್ ಬಂಗ್ಲೆಯು, ಈ ತಾರೀಖು ಲಾಗಾಯತು ಪ್ರಯಾಣಸ್ಥರಿಗೆ 3ನೇ ಕ್ಲಾಸ್ ಟ್ರಾವಲರ್ಸ್ ಬಂಗ್ಲೆಯಾಗಿ ಉಪಯೋಗಿಸಲ್ಪಡತಕ್ಕದ್ದು.

ತಾರೀಖು—ನೇ ಅಕ್ಟೋಬರ್ 1887.

ಕ್ಯಾಂಪ್ ನಂ. 1510.—1878ನೇ ಇಸವಿ ಆಗಸ್ಟ್ 10ನೇ ವರ್ತಮಾನ 130ನೇ ನಂಬರ್‌ವುಳ್ಳ ಲೇಟ್ ಚೀಫ್ ಕಮ್ಮಿಷನರವರ ಇಸ್ತಿಹಾರ್‌ನಾಮೆಯನ್ನು ಬದಲಾಯಿಸಿ, ಇದರಡಿ ನಮೂದ್ ಮಾಡಲ್ಪಟ್ಟ ಶಿವಮೊಗ್ಗಾ ಪಟ್ಟಣದ ಪರಿಷ್ಕರಿಸಲ್ಪಟ್ಟ ಚಕ್ಕುಬಂದಿಯು ದಿವಾಣರವರಿಂದ ಮಂಜೂರ್ಮಾಡಲ್ಪಟ್ಟು ಸರ್ವರ ತಿಳುವಳಿಕೇ ಬಗ್ಗೆ ಪ್ರಕಟಿಸಲ್ಪಡುತ್ತೆ:—

ಉತ್ತರಕ್ಕೆ.—ಶಿಂಗಪ್ಪನವರ ಬಂಗಲೇಯಿಂದ ಸದರೀ ಬಂಗಲೇ ದೇಖೀಲ್ ಮ್ಯುನಿಸಿಪಲ್ ರಸ್ತೆ ಮಾರ್ಗವಾಗಿ ಪೂರ್ವಕ್ಕೆ ಹೊರಟು ಮೆ॥ ಡರ್ಕರ್ ಮೆಕ್ಕೆಂಜಿ ಬಂಗಲೆ ಮತ್ತು ಯಗ್ಜಿಕ್ಯೂಟಿವ್ ಇಂಜನಿಯರ್ ಆಫೀಸ್ ದೇಖೀಲ್ ಶಿವಮೊಗ್ಗೆಯ 30ನೇ ಸರ್ವೇನಂಬರ್ ಬಳಿ ಹೊನ್ನಾಳಿ ರಸ್ತೆಯ ವರಿಗೂ ವಿಸ್ತರಿಸಿ ಅದೇರಸ್ತೆ ಮಾರ್ಗವಾಗಿ ಹೊರಟು, ಶಿವಮೊಗ್ಗಾ—ಹೊನ್ನಾಳಿ (ಹರಿಹರ) ರಸ್ತೆಗಳು ಅಂದರೆ (ಮಂದು ಯಗ್ಜಿಕ್ಯೂಟಿವ್ ಇಂಜನಿಯರ್ ಆಫೀಸಿನ ಮುಂಭಾಗದಿಂದಲೂ ಮತ್ತೊಂದು ಸೋಮಯ್ಯನವರ ಕೆರೆ ಯೇರಿ ಯಿಂದಲೂ ಆರಂಭಿಸುವ) ಸಂಧಿಸುವ ಮುಳಕೆರೆಯ 60ನೇ ಸರ್ವೇ ನಂಬರ್ ಬಳಿಯಣ ಆಕ್ಟ್ರಾಯಿ ತೆರಿಗೆ ಮನೆ ವರಿಗೂ ವಿಸ್ತರಿಸುತ್ತದೆ.

ದಕ್ಷಿಣಕ್ಕೆ.—ಪೊಲೀಸ್ ಠಾಣೇ ದೇಖೀಲ್ ಅದರ ಬಳಿಯಣ ಆಗುಂಬಿ ರಸ್ತೇಯಿಂದ ತುಂಗಾ ನದಿವರಿಗೂ ಅಂದರೆ ತುಂಗಾ ನದಿ ತೀರುವೆ ದಕ್ಷಿಣ ದಿಕ್ಕಿನ ಕೊನೆ ವರಿಗೂ ವಿಸ್ತರಿಸುತ್ತದೆ.

ಪೂರ್ವಕ್ಕೆ.—ಸದರೀ ತುಂಗಾನದಿ ತೀರುವೆಯ ದಕ್ಷಿಣ ದಿಕ್ಕಿನ ಕೊನೇಯಿಂದ ಹೊನ್ನಾಳಿ ರಸ್ತೆ ಮಾರ್ಗವಾಗಿ ಸೋಮಯ್ಯನವರ ಕೆರೇ ಯೇರಿ ದಾಟಿ ಶಿವಮೊಗ್ಗಾ ಹೊನ್ನಾಳಿ ರಸ್ತೆಗಳು (ಮಂದನೇ ಕಲಂನಲ್ಲಿ ಪ್ಯಾರೆಂಥಿ ಸೆಸ್‌ನಲ್ಲಿ ತೋರಿಸಲ್ಪಟ್ಟಿಂತೆ) ಸಂಧಿಸುವ ಮುಳಕೆರಿಯ 60ನೇ ಸರ್ವೇ ನಂಬರ್ ಬಳಿಯಣ ಆಕ್ಟ್ರಾಯಿ ತೆರಿಗೆ ಮನೆ ವರಿಗೂ ವಿಸ್ತರಿಸುತ್ತದೆ.

ಪಶ್ಚಿಮಕ್ಕೆ.—ಹೋದಿಗೆರೆ ಮುರಿಗೇಂದ್ರಪ್ಪನ ಬಂಗಲೇಯಿಂದ ಸದರೀ ಬಂಗಲೆ ದೇಖೀಲ್ ಸಾಗರದ (ಹೊನ್ನಾವರ) ದೊಡ್ಡ ರಸ್ತೆ ಮಾರ್ಗವಾಗಿ ದಕ್ಷಿಣಕ್ಕಾಗಿ ಶಿರೇದಾರ್ ತಬೇಲಿ ಮತ್ತು ಲೈನ್‌ಮನ್ ಮನೆಗಳು ದೇಖೀಲ್ 113 ಮತ್ತು 114ನೇ ಸರ್ವೇನಂಬರುಗಳು ಸಹಿತವಾಗಿ ಆಗುಂಬಿ ರಸ್ತೆಯಲ್ಲಿ ತುಂಗಾ ನದಿವರಿಗೂ ವಿಸ್ತರಿಸುತ್ತದೆ.

ತಾರೀಖು 20ನೇ ಅಕ್ಟೋಬರ್ 1887.

ಕ್ಯಾಂಪ್ ನಂ. 1555.—ಕೋಲಾರ ಡಿಸ್ಟ್ರಿಕ್ಟು ಟ್ರೆಜರೀ ಬಾಜೂಲುಳ್ಳ ಅಸಿಸ್ಟೆಂಟ್ ಕಮ್ಮಿಷನರ್ ಮೆ|| ಕೃಷ್ಣಯ್ಯಂಗಾರ್ರಿಗೆ, ಅವರು ಉಪಯೋಗಿಸಿಕೊಳ್ಳುವ ತಾರೀಖು ಮೊದಲು ಐದು ದಿವಸಗಳ ಕ್ಯಾಜುಎಲ್ ರಜಾ ಕೊಡಲ್ಪಟ್ಟಿರುತ್ತೆ.

ಕ್ಯಾಂಪ್ ನಂ. 1565.—ಚಿತ್ರದುರ್ಗದ ಮುನ್ಸಿಫ್ ವ 2ನೇ ಕ್ಲಾಸ್ ಮಾಜಿಸ್ಟ್ರೇಟರಾದ ತಿರುನಾರಣಾಚಾರ್ ಬಿ. ಯೆ. ಬಿ. ಎಲ್. ಯವರಿಗೆ, ಕ್ರಿಮಿನಲ್ ಪ್ರೊಸಿಜ್ಯೂರ್ ಕೋಡಿನ 357ನೇ ಸೆಕ್ಷನ್ ಅನುಸರಿಸಿ ಫಿರ್ಯಾದಿಗಳ ವ ಸಾಕ್ಷಿಗಾರರ ವಾಗ್ಮೂಲವನ್ನು ಸ್ವಪಸ್ಟೂರ್ ಇಂಗ್ಲಿಷ್ ಭಾಷೆಯಲ್ಲಿ ತೆಗದುಕೊಳ್ಳುವ ಬಗ್ಗೆ ಅಧಿಕಾರ ಕೊಡಲ್ಪಟ್ಟಿರುತ್ತೆ.

ತಾರೀಖು 24ನೇ ಅಕ್ಟೋಬರ್ 1887.

ಕ್ಯಾಂಪ್ ನಂ. 1580.—ಶ್ರೀಮನ್ ಮಹಾರಾಜಾ ಸರ್ಕಾರದವರು ಹುಕ್ಕುಂ ಮಾಡುವದೇನಂದರೆ, ಇದರಡೀಕಂಡ ಜಮ್ಮಿ ತಾಕುಗಳು, ಮೈಸೂರು ದೇಶದಲ್ಲಿ ಕೆಲವು ಜಮ್ಮಿ ತಾಕುಗಳಿಗೆ ಗನೀ ಕೆಲಸನಡಿಸುವ ಬಗ್ಗೆ ಲೈಸೆನ್ಸಿಗೋಸ್ಕರ ದರಖಾಸ್ತುಗಳನ್ನು ಆಪೇಕ್ಷಿಸುವಂಥಾ 1887ನೇ ಇಸವಿ ಸೆಪ್ಟಂಬರ್ 12ನೇ ಹುಕ್ಕುಂ 113ನೇ ನಂಬರ್ ಇಸ್ತಿಹಾರ್‌ನಾಮೆಯ A ಗುರ್ತಿನ ಅರ್ಜೆಡಿಕ್ಟಿಗೆ ಸೇರಿಸಲ್ಪಡತಕ್ಕದ್ದು:—

ಪ್ರತಿಷ್ಠಾನ ನಂಬರು.	ಪ್ರತಿ ತಾಲ್ಲೂಕಿನ ಹೆಸರು.	ಪ್ರತಿ ತಾಕು ಇರತಕ್ಕ ಪ್ರದೇಶ.			ಪೊಲೀಸ್ ಗ್ರಾಮಗಳ ನಂಬರು.	ಪ್ರತಿ ತಾಕು ಯಾವ ಯಾವ ಮ್ಯೋತ್ತರ ರೇಖೆ ಮತ್ತು ದಕ್ಷಿಣೋತ್ತರ ವೃತ್ತಗಳ ಸಮಭುಜ ರೇಖೆಗಳಲ್ಲಿ ಅಡಗಿರುತ್ತೆಂಬುವದು.		ಹಿಂದಿನ ಕಡೇ ಮೇಸ್ತಕಿನಲ್ಲಿ ವಿವರಿಸಲ್ಪಟ್ಟ ಯ್ಯಾಮ್ಯೋತ್ತರ ರೇಖೆ ಮತ್ತು ದಕ್ಷಿಣೋತ್ತರ ವೃತ್ತಗಳ ಸಮಭುಜ ರೇಖೆಗಳಲ್ಲಿ ಅಡಗಿರುವ ಜಮ್ಮಿಪೈಕಿ ಇದುವರಿಗೆ ಅನ್ಯಥಾ ವಿಲ್ಹಾಮ್ಯ ಮಾಡಲ್ಪಟ್ಟ ಜಮೀನಿನ ವಿಸ್ತೀರ್ಣ.	ಹಿಂದಿನ ಕಡೇ ಮೇಸ್ತಕಿನಲ್ಲಿ ಕಂಡ ಜಮೀನಿಗಳಲ್ಲಿ ಹೊಸದಾಗಿ ಕೊಡಲ್ಪಡುವ ಜಮೀನಿನ ವಿಸ್ತೀರ್ಣ.
		ಡಿಸ್ಟ್ರಿಕ್ಟು.	ತಾಲ್ಲೂಕು.	ಗ್ರಾಮಗಳು.		ದಕ್ಷಿಣೋತ್ತರ ವೃತ್ತಗಳು.	ಯಾಮ್ಯೋತ್ತರ ರೇಖೆ.		
15		ಕೋಲಾರ	ಚನ್ನರಾಯಪಟ್ಟಣ	1 ಮಾಲಪಟ್ಟಿ ಹಳ್ಳಿ 2 ಮಾದಾಪುರ 3 ರಾಜಾಪುರ	55	12°—56′ ಮತ್ತು 12°—57′ರ ಮಧ್ಯೆ	76°—33′ ಮತ್ತು 76°—35′ರ ಮಧ್ಯೆ		½ ಚದರಮೈಲಿ ಅಂದರೆ, ಪೂರ್ವ ಪಶ್ಚಿಮ ವಂದು ಮೈಲಿಲಿ ಉತ್ತರ ದಕ್ಷಿಣ ½ಮೈಲಿ
16		ಮೈಸೂರು	ಶ್ರೀರಂಗಪಟ್ಟಣ	1 ಹುವ್ವಿನಕೆರೆ 2 ವಡಯಂಡ ಹಳ್ಳಿ 3 ಗೊಬ್ಬಗಾಲ 4 ಕಾಳೇನಹಳ್ಳಿ 5 ಪೆರಮಾಂಡ ಹಳ್ಳಿ	57	12°—25′ ಮತ್ತು 12°—27′ರ ಮಧ್ಯೆ	76°—50′ ಮತ್ತು 76°—51′ರ ಮಧ್ಯೆ		½ ಚದರ ಮೈಲಿ

ತಾರೀಖು 22ನೇ ಅಕ್ಟೋಬರ್ 1887.

ಕ್ಯಾಂಪ್ ನಂ. 1551.—ಹುಜೂರು ಖಜಾನಾ ಬಕ್ಷೀರಾದ ಮೆ|| ಎ. ವೀರಾಸಾಮಿ ಮೊದಲಿಯಾರ್ರಿಗೆ, ಮಾಜೇ ಮಜಕೂರ್ 24ನೇ ಮಹ್ಕುಂ ಲಾಗಾಯತು ಯಾ ಅವರು ಉಪಯೋಗಿಸಿಕೊಂಡ ತಾರೀಖು ಮೊದಲು 5 ದಿವಸಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತೆ.

ತಾರೀಖು 23ನೇ ಅಕ್ಟೋಬರ್ 1887.

ಕ್ಯಾಂಪ್ ನಂ. 1587.—ಷಿಕಾರಿಪುರ ವ ಸೊರಬ ತಾಲ್ಲೂಕಿನ ಇದರಡೀಕಂಡ ಮಾರ್ಗಣೀಗಳು ಫಾರೆಸ್ಟು ಕೆಲಸಗಳಿಗೋಸ್ಕರ ಮಲ್ನಾಡೆಂಬದಾಗಿ ಆಚರಿಸಲ್ಪಡತಕ್ಕದ್ದು:—

ಪಿಕಾರಿಪುರ ತಾಲ್ಲೂಕು	..	ಪಳಂದೂರು	ವಹಾಗಣಿ
		ಬಾರೂರು	,,
ಸೊರಬ ತಾಲ್ಲೂಕು	..	ಸೊರಬ	,,
		ಕ್ಯಾಸನೂರು	,,
		ಚಂದ್ರಗುತ್ತಿ	,,
		ಚಿಟ್ಟೂರು	,,
		ಕೆಗ್ಗಾ	,,
		ಜೆಜ್ಜಿ	,,

ತಾರೀಖು 25ನೇ ಅಕ್ಟೋಬರ್ 1887.

ನಂ. 138.—ತೀರ್ಥಹಳ್ಳಿ ಅಮಲ್ದಾರ್ ತಿರುಮಲಾಚಾರ್ರಿಗೆ, ಮೂಹೇ ಮಜಕೂರ್ 7ನೇ ಮತ್ತು 1420ನೇ ನಂಬರ್ ಇಸ್ತಿಹಾರ್ ನಾಮೆಯಿಂದ ಕೊಡಲ್ಪಟ್ಟ ಬಂದುತಿಂಗಳ ಪ್ರಿವಿಲೀಜ್ ರಜಾ ಅವರಿಂದ ಉಪಯೋಗಿಸಲ್ಪಡದೇ ಯಿರುವದರಿಂದ ಅವರ ಖಾಯಿಷ್‌ಮೇರಿಗೆ ರದ್ದು ಮಾಡಲ್ಪಟ್ಟಿರುತ್ತೆ.

ಬಿ. ಪೋಜೇಬ್ ಹುಕ್ಕುಂ,
ಆರ್. ವಿಜಯೀಂದ್ರರಾವ್,
ಚೀಫ್ ಸೆಕ್ರೆಟರಿ.